# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಪ್ರವೇಶಾತಿ ವಿಭಾಗ

ಅಂತರ್ಜಾಲ: www.ksoumysuru.ac.in ಇ-ಮೇಲ್ – admksou@gmail.com


ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 168 /2026-27/01 ದಿನಾಂಕ: 11.08.2026

**ಸುತ್ತೋಲೆ:**

**ವಿಷಯ : 2026-27ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ಕುರಿತಂತೆ;**

**ಉಲ್ಲೇಖ:** 1.UGC-DEB ನ ಇ-ಮೇಲ್ ಸಂದೇಶ ದಿನಾಂಕ: 02.07.2026

2.ಡೀನ್ (ಶೈ), ಕರಾಮುವಿ ಇವರ ಟಿಪ್ಪಣಿ ಸಂಖ್ಯೆ: ಕರಾಮುವಿ/ಡೀನ್(ಶೈ)/04/ 26-27, ದಿನಾಂಕ03.07.2026

3.ವಿವಿ ಪ್ರವೇಶಾತಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/ 168 / 2026-27, ದಿನಾಂಕ: 10.07.2026

4.UGC Public Notice No: F.No; 4-1/2025(DEB/R-4) ದಿನಾಂಕ:05.08.26

5.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.08.2026

******

2026-27ರ ಜುಲೈ ಆವೃತ್ತಿಯಲ್ಲಿ ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮದ ಪ್ರವೇಶಾತಿಗೆ ಉಲ್ಲೇಖ(3)ರಂತೆ ಪರಿಷ್ಕೃತ ಪ್ರವೇಶಾತಿ ಅಧಿಸೂಚನೆಯನ್ವಯ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿ, ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿ.ಇ.ಟಿ)ಗೆ ಅರ್ಜಿ ಸಲ್ಲಿಸಲು ದಿನಾಂಕ:10.08.2026 ಅಂತಿಮ ದಿನಾಂಕವಾಗಿಯೂ, ಹಾಗೂ ದಿನಾಂಕ: 16.08.2026 (ಭಾನುವಾರ)ರಂದು ಸಿ.ಇ.ಟಿ. ಪರೀಕ್ಷೆ ನಿಗದಿಪಡಿಸಲಾಗಿದ್ದಿತು.

ಯುಜಿಸಿಯು ಉಲ್ಲೇಖ(4)ರಲ್ಲಿ 2026-27ರ ಜುಲೈ ಆವೃತ್ತಿಯ ಪ್ರವೇಶಾತಿ ದಿನಾಂಕವನ್ನು ಅಭ್ಯರ್ಥಿಗಳ ಅನುಕೂಲಕ್ಕಾಗಿ ವಿಸ್ತರಿಸಿರುವುದರಿಂದ **ಬಿ.ಇಡಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಲಾಗಿದ್ದ ದಿನಾಂಕವನ್ನು** ದಿನಾಂಕ: 22.08.2026 ರವರೆಗೆ ವಿಸ್ತರಿಸಲಾಗಿದೆ. **ಹಾಗೆಯೇ, ಸಿ.ಇ.ಟಿ ಪರೀಕ್ಷೆಗೆ ಈಗಾಗಲೇ ನಿಗದಿಯಾಗಿದ್ದ ದಿನಾಂಕವನ್ನು ಪರಿಷ್ಕರಿಸಿ ದಿನಾಂಕ:30.08.2026 ಕ್ಕೆ ಮರು ನಿಗದಿಪಡಿಸಲಾಗಿದೆ. ಪರಿಷ್ಕೃತ ದಿನಾಂಕದಲ್ಲಿ ಸಿ.ಇ.ಟಿ ಪರೀಕ್ಷೆಯನ್ನು ಸೂಚಿತ ಸ್ಥಳಗಳಲ್ಲಿ** ನಡೆಸಲಾಗುವುದು.

ಅಭ್ಯರ್ಥಿಗಳು ಈ ಬದಲಾವಣೆಯನ್ನು ಗಮನಿಸಿ ಅದರಂತೆ ಕ್ರಮವಹಿಸುವುದು. ಸಿ.ಇ.ಟಿ ಪರೀಕ್ಷೆಗೆ ಹೊಸದಾಗಿ ಅರ್ಜಿ ಸಲ್ಲಿಸಬಯಸುವ ಅರ್ಹ ಅಭ್ಯರ್ಥಿಗಳು ಇದನ್ನು ಸದುಪಯೋಗಪಡಿಸಿಕೊಂಡು ಪರಿಷ್ಕೃತ ದಿನಾಂಕದೊಳಗೆ ವಿವಿಯ ಅಡ್ಮಿಷನ್ ಪೋರ್ಟಲ್‌ನಲ್ಲಿ https://ksouportal.com/views/StudentHome.aspx ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

1. **ಬಿ.ಇಡಿ. ಸಿ.ಇ.ಟಿ. ಪರೀಕ್ಷೆಗೆ ಅರ್ಜಿ ಸಲ್ಲಿಸಲು ಪರಿಷ್ಕೃತ ಅಂತಿಮ ದಿನಾಂಕ:** 22.08.2026
2. **ಬಿ.ಇಡಿ. ಸಿ.ಇ.ಟಿ ಪರೀಕ್ಷೆಯ ಪರಿಷ್ಕೃತ ದಿನಾಂಕ:** 30.08.2026

ಕುಲಸಚಿವ

ಗೆ:

2026-27ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸಿರುವ / ಸಲ್ಲಿಸುವ ಅಭ್ಯರ್ಥಿಗಳ ಗಮನಕ್ಕೆ – ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ;

**ಪ್ರತಿ:**

1 ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.

2 ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.- ಇವರಿಗೆ LSC ಗಳ ಗಮನಕ್ಕೆ ತರುವುದು

3 ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.

4 ಪ್ರಾದೇಶಿಕ ನಿರ್ದೇಶಕರು, ವಿವಿ ಪ್ರಾದೇಶಿಕ ಕೇಂದ್ರಗಳು- ನಿಮ್ಮ ಪ್ರಾದೇಶಿಕ ಕೇಂದ್ರದ ವ್ಯಾಪ್ತಿಯಲ್ಲಿ ಕೂಡಲೇ ಕ್ರಮವಹಿಸಿ ದೈನಂದಿನ ಪತ್ರಿಕೆಗಳಲ್ಲಿ ಸುದ್ದಿ ಮಾಧ್ಯಮದಡಿ ಉಚಿತವಾಗಿ ಪ್ರಕಟಿಸಲು ಸೂಚಿಸಿದೆ.

5 ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು

6 ಮೇಲ್ವಿಚಾರಕರು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ, ಮೈಸೂರು – ಈ ಸುತ್ತೋಲೆಯನ್ನು ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸಿರುವ ಹಾಗೂ ಸಲ್ಲಿಸುವ ಅಭ್ಯರ್ಥಿಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿವಿಯ ಅಂತರ್ಜಾಲದಲ್ಲಿ ಕೂಡಲೇ ಪ್ರಕಟಿಸಲು ತಿಳಿಸಿದೆ.

7 ಮೇಲ್ವಿಚಾರಕರು, ಇನ್‌ಹಾಕ್ ಐಟಿ ಸಲ್ಯೂಷನ್ಸ್, ಬೆಂಗಳೂರು – ಇವರಿಗೆ ಈಗಾಗಲೇ ಸಿ.ಇ.ಟಿ.ಗೆ ಅರ್ಜಿ ಸಲ್ಲಿಸಿರುವ ಪ್ರತೀ ಅಭ್ಯರ್ಥಿಗಳಿಗೆ ಸಂದೇಶವನ್ನು SMS ಹಾಗೂ whatsapp ಮೂಲಕವೂ ಕೂಡಲೇ ಕಳುಹಿಸಲು ತಿಳಿಸಿದೆ.

8 2026ರ ಬಿ.ಇಡಿ ಶಿಕ್ಷಣಕ್ರಮದ ಸೀಟುಗಳ ಆಯ್ಕೆ ಸಮಿತಿಯ ಗಮನಕ್ಕೆ.

9 ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.

10 ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.

11 ಕಚೇರಿ ಪ್ರತಿ